ಉಲ್ಲೇಖನಾರ್ಹ. ಆಗ ಸಿನಿಮಾದವರಿಗಾಗಿ ಕಥೆ ಹೊಸೆಯುವ ದಂಡೇ ಮದರಾಸಿನಲ್ಲಿತ್ತು–ಎಂ.ಡಿ. ಸುಂದರ್, ಷಣ್ಮುಗಸುಂದರಂ, ರಾಮಾಂಜನೇಯಂ ಮಾದರಿಯವರು. ಆಗೆಲ್ಲಾ ಹೆಚ್ಚಾಗಿ ಪೌರಾಣಿಕ, ಜನಪರ, ಭಕ್ತಿರಸ, ಐತಿಹಾಸಿಕ ಚಿತ್ರಗಳ ಯುಗ. 1960ರ ದಶಕದಲ್ಲಿ ಸಾಮಾಜಿಕ ಕೌಟುಂಬಿಕ ಚಿತ್ರಗಳನ್ನು ನಿರ್ಮಿಸುವ ಉಮೇದಿಗೆ ಬಿತ್ತು ಚಿತ್ರರಂಗ. ತಮಿಳರ ಕಥೆಗಳು ನಮ್ಮ ನೇಟಿವಿಟಿಗೆ ಹೊಂದಲ್ಲವೆಂದಾಗ ಕನ್ನಡ ಕಾದಂಬರಿಗಳತ್ತ ನಿರ್ಮಾಪಕ ನಿರ್ದೇಶಕರ ದೃಷ್ಟಿ ಹೊರಳಿತು. ಹೀಗಾಗಿ, ಮೊಟ್ಟ ಮೊದಲಿಗೆ ಕೃಷ್ಣಮೂರ್ತಿ ಪುರಾಣಿಕರ ಕಾದಂಬರಿ 'ಧರ್ಮದೇವತೆ', 'ಕರುಣೆಯೇ ಕುಟುಂಬದ ಕಣ್ಣು' ಹೆಸರಿನಲ್ಲಿ ಚಿತ್ರವಾಯಿತು–ಯಶಸ್ವಿಯೂ ಆಯಿತು. ಪುನಃ ಅವರದ್ದೇ ಕಾದಂಬರಿ 'ಕುಲವಧು' ಚಿತ್ರವಾಯಿತು. ಅದರಲ್ಲೂ ಡಾ. ರಾಜ್, ಲೀಲಾವತಿ, ನರಸಿಂಹರಾಜು, ಬಾಲಕೃಷ್ಣ ಇದ್ದರು. ಚಿತ್ರ ಯಶಸ್ವಿಯಾಯಿತು. ಕನ್ನಡ ಜನಪ್ರಿಯ ಕಾದಂಬರಿಗಳತ್ತ ಸಿನಿಮಾದವರ ಕಣ್ಣು ಹೊರಳಿತು. ಅ.ನ. ಕೃಷ್ಣರಾಯರ 'ಸಂಧ್ಯಾರಾಗ' ಕೃತಿ ಆಧಾರಿತ ಸಂಗೀತ ಪ್ರಧಾನ ಚಿತ್ರವು ಡಾ. ರಾಜ್, ಭಾರತಿ ಅಭಿನಯದಲ್ಲಿ ತೆರೆಕಂಡು ಹಿಟ್ ಆಯಿತು. ಬಳಿಕ ತ.ರಾ.ಸು. ಅವರ 'ಚಂದವಳ್ಳಿಯ ತೋಟ' ಕೃತಿ ಚಲನಚಿತ್ರಕ್ಕೆ ಆಯ್ಕೆ ಆಯಿತು. ಡಾ. ರಾಜ್, ಉದಯಕುಮಾರ್, ಜಯಂತಿ ಅಭಿನಯದ ಗ್ರಾಮೀಣ ಹಿನ್ನೆಲೆಯ ಕೌಟುಂಬಿಕ ಸದಭಿರುಚಿಯ ಚಿತ್ರಕ್ಕೆ ತ.ರಾ.ಸು. ಹಾಡುಗಳನ್ನು ಬರೆದಿದ್ದರು. ಚಿತ್ರ ಯಶಸ್ವಿಯಾದುದಲ್ಲದೇ ರಾಷ್ಟ್ರಪ್ರಶಸ್ತಿಯೂ ಬಂತು. ಅನಂತರ ತೆರೆ ಕಂಡಿದ್ದು ಅವರದ್ದೇ ಕಾದಂಬರಿ 'ಚಕ್ರತೀರ್ಥ' ಹೆಸರಿನ ಚಿತ್ರ. ಮುಂದೆ 'ಮಾರ್ಗದರ್ಶಿ', 'ಸಾಕುಮಗಳು' ಚಿತ್ರಗಳಾದವು. ಹೆಸರಾಂತ ತಾರಾಗಣವಿದ್ದರೂ ಚಿತ್ರ ಓಡಲಿಲ್ಲ. ತ.ರಾ.ಸು. ಕೆಲವಕ್ಕೆ ಸಂಭಾಷಣೆಯನ್ನು ಬರೆದಿದ್ದರು. ಅವರ ಸಂಭಾಷಣೆ ಸುದೀರ್ಘ. ಸಿನಿಮಾಕ್ಕೆ ಹೊಂದಲಿಲ್ಲವೆಂದು ಸಿನಿಮಾ ಜನ ಮೂಗು ಮುರಿದರು. ತ.ರಾ.ಸು. ತಲೆ ಕೆಡಿಸಿಕೊಳ್ಳಲಿಲ್ಲ. ಸಿನಿಮಾ ಮಂದಿ ಕಾದಂಬರಿಯ ಕಡೆಗಿನ ತಮ್ಮ ದಿಕ್ಕು ಬದಲಿಸಿದರು.

1970ರಲ್ಲಿ ಹೊಸ ಅಲೆ ಕಾಲಿಟ್ಟಿತು. ಪ್ರಯೋಗಾತ್ಮಕ ಸಿನಿಮಾಗಳು ಕಡಿಮೆ ಬಂಡವಾಳದಲ್ಲಿ ತೆರೆಗೆ ಬರಲಾರಂಭಿಸಿದವು. 'ಸಂಸ್ಕಾರ', 'ಕಾಡು', 'ಘಟಶ್ರಾದ್ಧ', 'ವಂಶವೃಕ್ಷ', 'ಚೋಮನದುಡಿ' ಇವೆಲ್ಲವೂ ಕತೆ, ಕಾದಂಬರಿ ಆಧಾರಿತ ಚಿತ್ರಗಳೇ. ರಾಷ್ಟ್ರೀಯ ಪ್ರಶಸ್ತಿಗಳನ್ನು ತಂದು ಕನ್ನಡ ಚಿತ್ರರಂಗದ ಹಿರಿಮೆಯನ್ನು ಹೆಚ್ಚಿಸಿದರೂ ಚಿತ್ರಗಳು ಜನಮನವನ್ನು ಮುಟ್ಟಲಿಲ್ಲ. ಕಾಸೂ ಗಿಟ್ಟಲಿಲ್ಲ. ಏಕತಾನತೆ ಕಾಡಿತು. ಆಗಿನ ನಿರ್ದೇಶಕರಾದ ಸಿದ್ಧಲಿಂಗಯ್ಯ, ಪುಟ್ಟಣ್ಣ ಕಣಗಾಲ್, ದೊರೆ–ಭಗವಾನ್, ಕೆ.ವಿ. ಜಯರಾಮ್, ಗೀತಪ್ರಿಯರಂಥವರು ಜನಪ್ರಿಯ ಕಾದಂಬರಿಕಾರರತ್ತ ಕಣ್ಣು ನೆಟ್ಟರು. ಪುಟ್ಟಣ್ಣನವರು ತ್ರಿವೇಣಿಯವರ ಸಾಲು ಸಾಲು ಕಾದಂಬರಿ ಆಧರಿಸಿ ಸ್ತ್ರೀ ಪ್ರಧಾನ ಚಿತ್ರಗಳನ್ನು ತೆರೆಗರ್ಪಿಸಿ ಗೆಲುವಿನ ನಗೆ ಬೀರಿದರು. ನಿರ್ದೇಶಕ ಸಿದ್ಧಲಿಂಗಯ್ಯ ಕಾದಂಬರಿಕಾರರಾದ ಗೊರೂರು, ಟಿ.ಕೆ. ರಾಮರಾವ್ ಅವರ ಹಿಂದೆ ಬಿದ್ದರೆ, ಕೆ.ವಿ. ಜಯರಾಮ್ ಅವರು ಸಾಯಿಸುತೆ ಕಾದಂಬರಿಗಳತ್ತ ಕಣ್ಣು ಹಾಯಿಸಿದರು. 'ಶರಪಂಜರ'ದವರೆಗೂ ಎಲ್ಲವೂ ಸರಿಯಿತ್ತು. ಆಮೇಲೆ ಮತ್ತದೆ ಏಕತಾನತೆ. ಅದರಿಂದ ಹೊರ ಬರಲು ನಾಯಕ ಪ್ರಧಾನ ಸಿನಿಮಾದತ್ತ ಸ್ಕೆಚ್ ಹಾಕಿದ ಪುಟ್ಟಣ್ಣ, ತ.ರಾ.ಸು. ಅವರ ಮೂರು ಕಾದಂಬರಿಗಳಾದ 'ನಾಗರಹಾವು', 'ಒಂದು ಗಂಡು ಎರಡು ಹೆಣ್ಣು', 'ಸರ್ಪಮತ್ಸರ'ಗಳನ್ನು ಆಯ್ಕೆಮಾಡಿ, 'ನಾಗರಹಾವು' ಸಿನಿಮಾವನ್ನು ತೆರೆಗೆ ತರಲು ಅಣಿಯಾದರು. ಎಲ್ಲಾ ಹೊಸ ಕಲಾವಿದರನ್ನೇ ಆಯ್ದುಕೊಂಡು ಚಿತ್ರದುರ್ಗದ ಏಳು ಸುತ್ತಿನ ಕೋಟೆಯಲ್ಲಿ ಕ್ಯಾಂಪ್ ಹಾಕಿದರು. ಶೂಟಿಂಗ್ ನೋಡಲು ದಿನವೂ ಜನ ಜಾತ್ರೆ. ಜನರ ನಡುವೆ ನಾನು ನುಗ್ಗಿ ನೋಡಿದ್ದಿದೆ. ಆಗ ನಾನು ಮುಂದೊಂದು ದಿನ ಪುಟ್ಟಣ್ಣನವರೊಂದಿಗೆ ವಿಷ್ಣು, ಅಂಬಿ ಜೊತೆಗೆ ಸಿನಿಮಾಗಳಲ್ಲಿ ತೊಡಗಿಸಿಕೊಳ್ಳುವೆನೆಂದು ಕನಸೂ ಕಂಡವನಲ್ಲ. ಆಗೆಲ್ಲಾ ಜನರ ಪಾಲಿಗೆ